## Mysooru Mithra (Kannada Daily)

Date: Saturday, August 10, 2013 Page No.5

Edition: Mysore Language: Kannada

# ಆರ್ಥಿಕ ನಿರ್ವಹಣೆ ವೈಜ್ಞಾನಿಕವಾಗಿರಬೇಕು

## ಟಾಟಾ ಸ್ಟೀಲ್‌ನ ಕಾರ್ಯನಿರ್ವಾಹಕ ನಿರ್ದೇಶಕ ಕೌಶಿಕ್ ಚಟರ್ಜಿ

ಮೈಸೂರು, ಆ. ೯ (ಕಿಕು)– ಆರ್ಥಿಕ ನಿರ್ವಹಣೆ ವೈಜ್ಞಾನಿಕವಾಗಿರಬೇಕು ಎಂದು ಟಾಟಾ ಸ್ಟೀಲ್‌ನ ಕಾರ್ಯನಿರ್ವಾಹಕ ನಿರ್ದೇಶಕ ಕೌಶಿಕ್ ಚಟರ್ಜಿ ತಿಳಿಸಿದ್ದಾರೆ.

ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಂಸ್ಥೆಯಲ್ಲಿ ಏರ್ಪಡಿಸಿದ್ದ ಪ್ರಸ್ತುತ ಆರ್ಥಿಕ ಮತ್ತು ಅಕೌಂಟ್ಸ್ ಹೊಸ ವಿಧಾನಗಳು ಕುರಿತ ಎರಡು ದಿನಗಳ ಎರಡನೇ ಅಂತರರಾಷ್ಟ್ರೀಯ ಆರ್ಥಿಕ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಆರ್ಥಿಕ ನಿರ್ವಹಣೆಗೆ ಸರ್ಕಾರದ ನೀತಿ ವೈಜ್ಞಾನಿಕವಾಗಿರಬೇಕು, ಪರಿಸ್ಥಿತಿ ಪ್ರಚೋದಿಸುವ ನಿರ್ಧಾರಗಳನ್ನು ತೆಗೆದುಕೊಳ್ಳದೇ ವೈಜ್ಞಾನಿಕವಾಗಿ ನೋಡುವುದರಿಂದ ಆರ್ಥಿಕ ಸಂಕಷ್ಟಗಳನ್ನು ಎದುರಿಸಬಹುದು. ಈ ರೀತಿ ಕಾರ್ಯನಿರ್ವಹಣೆ ಮಾಡುವುದರಿಂದ ಮಾತ್ರ ಆರ್ಥಿಕ ಸುಸ್ಥಿರತೆ ಮತ್ತು ಸುಧಾರಣೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಆರ್ಥಿಕ ಸ್ಥಿತಿ ಚೆನ್ನಾಗಿರಬೇಕು ಎಂದರೆ ಸರ್ಕಾರದ ಆಡಳಿತದ ನೀತಿ ಚೆನ್ನಾಗಿರಬೇಕು. ಹಾಗೆಯೇ ರಾಜಕೀಯ ನಿರ್ಧಾರಗಳು ಕೂಡ ಮುಖ್ಯವಾಗುತ್ತವೆ. ಈ ಹಿನ್ನಲೆಯಲ್ಲಿ ಉತ್ತಮ ಆಡಳಿತ ಮತ್ತು ಪಾರದರ್ಶಕ ನೀತಿ ಅಳವಡಿಸಿಕೊಂಡಾಗ ಮಾತ್ರ ಆರ್ಥಿಕ ಸ್ಥಿರತೆ ಕಾಣಲಿದೆ ಎಂದರು.

ಆರ್ಥಿಕ ಸ್ಥಿತಿ ನಿರ್ವಹಣೆ ಎಂದರೆ ಆಪತ್ಕಾಲ ನಿರ್ವಹಣೆ ಮಾಡುವ ವಿಧಾನ ಹೇಗೆ ಎಂಬುದರ ಮೇಲೆ ಆಧಾರವಾಗಿರುತ್ತದೆ. ಇದು ಅತ್ಯಂತ ಪಾರದರ್ಶಕವಾಗಿರಬೇಕು. ಕೇವಲ ಆಡಳಿತ ವಿಭಾಗ ನಿರ್ಧಾರ ತೆಗೆದುಕೊಂಡು ಅದನ್ನು ಪಾಲಿಸುವುದಷ್ಟೇ ಅಲ್ಲ, ಆ ಪರಿಸ್ಥಿತಿಯನ್ನು ಎದುರಿಸಲು ಸಾಮೂಹಿಕ ಬೌದ್ಧಿಕ ಸಾಮರ್ಥ್ಯದ ನಿರ್ವಹಣೆಗೆ ಬಿಡಬೇಕು. ಆಗ ಇಡೀ ವ್ಯವಸ್ಥೆ ಕೆಲಸ ಮಾಡುವುದರಿಂದ ಎಂತಹ ಪರಿಸ್ಥಿತಿ ನಿರ್ವಹಣೆ ಮಾಡಲು ಸಾಧ್ಯ ಎಂದು ತಿಳಿಸಿದರು.

**ವ್ಯತಿರಿಕ್ತ ಪರಿಣಾಮ :** ಈಗಿನ ಸ್ಥಿತಿಯಲ್ಲಿ ಅಮೇರಿಕಾ ಚೀನಾ ಭಾರತ ಸೇರಿದಂತೆ ಎಲ್ಲ ದೇಶಗಳು ಆರ್ಥಿಕವಾಗಿ ಒಂದರ ಮೇಲೆ ಮತ್ತೊಂದು ಅವಲಂಬನೆಯಾಗಿವೆ. ಯಾವುದೇ ದೇಶದಲ್ಲಿ ಆರ್ಥಿಕ ಕುಸಿತವಾದರೆ ಅದು ಅವಲಂಬಿತ ದೇಶಗಳ ಆರ್ಥಿಕ ಸ್ಥಿತಿಯ ಮೇಲೂ ಪ್ರಭಾವ ಬೀರುತ್ತದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಆರ್ಥಿಕ ನೀತಿಗಳು ಮತ್ತು ಆರ್ಥಿಕ ಸ್ಥಿತಿಯ ನಿರ್ವಹಣೆ ಬಗ್ಗೆ ಚಿಂತನೆ ಮಾಡಬೇಕು ಎಂದು ತಿಳಿಸಿದರು.

ಅಕೌಂಟ್ಸ್ ಮ್ಯಾನೇಜಿಂಗ್ ಕೂಡ ಸುಸ್ಥಿರತೆಗೆ ಒತ್ತು ಕೊಡಬೇಕು. ಈಗಿನ ಆರ್ಥಿಕ ಸ್ಥಿತಿ ಎಲ್ಲ ಕಡೆ ಸಂಕಷ್ಟದಲ್ಲಿದೆ. ಜಾಗತಿಕ ಮಾರುಕಟ್ಟೆ ಮತ್ತು ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನಮ್ಮ ರಾಜಕೀಯ ನಿರ್ಧಾರಗಳಾಗಬೇಕು ಎಂದು ತಿಳಿಸಿದರು. ಕಾಲೇಜಿನ ನಿರ್ದೇಶಕ ಡಾ. ಎನ್. ಪರಶುರಾಮನ್ ಸ್ವಾಗತಿಸಿದರು ಮತ್ತು ಸಮ್ಮೇಳನದ ಮುಖ್ಯಸ್ಥ ಡಾ. ಉಲ್ಲಾಸ್‌ರಾವ್ ಸಮ್ಮೇಳನದ ಬಗ್ಗೆ ತಿಳಿಸಿದರು.

ಎರಡು ದಿನಗಳ ಕಾಲ ನಡೆಯುವ ಈ ಸಮ್ಮೇಳನದಲ್ಲಿ ಭಾರತ, ಆಸ್ಟ್ರೇಲಿಯಾ, ಇರಾನ್, ಅಫ್ಘಾನಿಸ್ತಾನ್, ಬಾಂಗ್ಲಾದೇಶ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್‌ನಿಂದ ಸುಮಾರು ೯೦ ಕ್ಕೂ ಹೆಚ್ಚು ಸಂಶೋಧಕರು, ಉಪನ್ಯಾಸಕರು, ಬೋಧಕರು, ತಜ್ಞರು, ಮತ್ತು ಉದ್ಯಮಿಗಳು, ಪಾಲ್ಗೊಂಡಿದ್ದಾರೆ.

ಇನ್ಫೋಸಿಸ್‌ನ ನಾಗರಾಜನ್ ಶ್ರೀನಿವಾಸನ್ ಮಾತನಾಡಿದರು. ನಾಳೆ ಇನ್ಫೋಸಿಸ್ ಮಾರ್ಕೆಟಿಂಗ್ ವಿಭಾಗದ ಡಾ. ಅಶೋಕ ಹೆಗಡೆ ಮಾತನಾಡಲಿದ್ದಾರೆ.